# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 635
2. ಸದಸ್ಯರ ಹೆಸರು : ಶ್ರೀ ಎಂ. ಎಲ್. ಅನಿಲ್‌ಕುಮಾರ್
   (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3. ಉತ್ತರಿಸ ಬೇಕಾದ ದಿನಾಂಕ : 12-03-2025
4. ಉತ್ತರಿಸ ಬೇಕಾದವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಕೆ.ಜಿ.ಎಫ್. ತಾಲ್ಲೂಕು ಬೇತಮಂಗಲದಲ್ಲಿ ಇರುವ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಯ ಆವರಣದಲ್ಲಿದ್ದ ಹೆಚ್ಚಿನ ಮೌಲ್ಯದ ಮರಗಳನ್ನುಅರಣ್ಯ ಇಲಾಖೆಯ ಅನುಮತಿ ಇಲ್ಲದೇ ಕಟಾವು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೆ.ಜಿ.ಎಫ್. ತಾಲ್ಲೂಕು ಬೇತಮಂಗಲದಲ್ಲಿ ಇರುವ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಯ ಆವರಣದಲ್ಲಿ ಸಾರ್ವಜನಿಕ ಉಪಯೋಗಕ್ಕೆ ಮೀನುಮರಿ ಪ್ಯಾಕಿಂಗ್ ಶೆಡ್ ಮತ್ತು ಶೌಚಾಲಯ ನಿರ್ಮಾಣಕ್ಕೆ ಅವಶ್ಯಕತೆ ಇದ್ದ ಜಾಗದಲ್ಲಿ ಇದ್ದ ಒಂದು ಸಿಲ್ವರ್ ಓಕ್ ಮರ ಇದ್ದು ಅದನ್ನು ತೆರವುಗೊಳಿಸುವ ಕುರಿತಂತೆ ಅರಣ್ಯ ಇಲಾಖೆಯೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದ್ದು, ಅನುಮತಿ ನಿರೀಕ್ಷೆಯಲ್ಲಿ ಮರವನ್ನು ಕಟಾವು ಮಾಡಲಾಗಿದೆ. |
| ಆ) | ಸರ್ಕಾರದ ಆವರಣದಲ್ಲಿರುವ ಮರಗಳನ್ನು ಕಟಾವು ಮಾಡುವ ಮುಂಚಿತವಾಗಿ ಮರಗಳ ಮೌಲ್ಯವನ್ನು ನಿಗದಿ ಪಡಿಸಬೇಕಾಗಿರುತ್ತದೆ ಎಂಬುದರ ಬಗ್ಗೆ ಸರ್ಕಾರದಲ್ಲಿ ನಿಯಮಗಳಿಲ್ಲವೇ; (ವಿವರ ನೀಡುವುದು ) | ಈ ಹಿನ್ನೆಲೆಯಲ್ಲಿ ಮರದ ಮೌಲ್ಯ ಮಾಪನ ಮಾಡಿಸಿ ಹರಾಜು ಪ್ರಕ್ರಿಯೆ ಕೈಗೊಳ್ಳಲಾಗುವುದು. |
| ಇ) | ಈ ಕಛೇರಿಯ ಆವರಣದಲ್ಲಿ ಕಳೆದ 1 ವರ್ಷದಿಂದ ಕಟಾವು ಮಾಡಿರುವ ಮರಗಳ ತಳಿಯ ವಿವರ ನೀಡುವುದು: ಎಷ್ಟು ಮೌಲ್ಯ ನಿಗದಿ ಪಡಿಸಲಾಗಿತ್ತು: ಕಡಿದ ಮರಗಳನ್ನು ಯಾವ ರೀತಿ ಮಾರಾಟ ಮಾಡಲಾಗಿದೆ: ಬಂದ ಆದಾಯ ಎಷ್ಟು: (ಸಂಬಂದಪಟ್ಟ ಇಲಾಖೆಗಳಿಂದ ಪಡೆದ ಅನುಮತಿ ವಿವರಗಳನ್ನು ದಾಖಲೆಗಳೊದಿಂಗೆ ನೀಡುವುದು ) | ಬೇತಮಂಗಲದಲ್ಲಿರುವ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಯ ಆವರಣದಲ್ಲಿ ಕಳೆದ ಒಂದು ವರ್ಷದಲ್ಲಿ ಮೇಲೆ ಪ್ರಸ್ತಾಪಿಸಿರುವ ಮರವೊಂದನ್ನು ಹೊರತು ಪಡಿಸಿ ಯಾವುದೇ ತಳಿಯ ಮರಗಳನ್ನು ಕಟಾವು ಮತ್ತು ಮಾರಾಟ ಮಾಡಿರುವುದಿಲ್ಲ.<br><br>ಪ್ರಸ್ತುತ ಮೇಲೆ ವಿವರಿಸಿದಂತೆ ಸಾರ್ವಜನಿಕ ಉಪಯೋಗಕ್ಕೆ ಮೀನುಮರಿ ಪ್ಯಾಕಿಂಗ್ ಶೆಡ್ ಮತ್ತು ಶೌಚಾಲಯ ನಿರ್ಮಾಣಕ್ಕೆ ಅಡಚಣೆಯಾಗಿದ್ದ ಒಂದು ಸಿಲ್ವರ್ ಓಕ್ ಮರವನ್ನು ಮಾತ್ರ ಕಟಾವು ಮಾಡಲಾಗಿದೆ. |

| | | |
|---|---|---|
| | | ಅರಣ್ಯ ಇಲಾಖೆಯು ಸದರಿ ಮರದ ಮೌಲ್ಯವನ್ನು ನೀಡಿದ ನಂತರ ಮರವನ್ನು ನಿಯಮಾನುಸಾರ ವಿಲೇವಾರಿ ಮಾಡಿ ಇದರಿಂದ ಬರುವ ಆದಾಯವನ್ನು ಸರ್ಕಾರಕ್ಕೆ ಜಮಾ ಮಾಡಲು ಕ್ರಮ ವಹಿಸಲಾಗುವುದು. |
| ಈ) | ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಸರ್ಕಾರಿ ಕಛೇರಿಯ ಆವರಣದಲ್ಲಿನ ಆಸ್ತಿಗೆ ಧಕ್ಕೆ ಉಂಟಾಗಿರುವುದಕ್ಕೆ ಹೊಣೆ ಯಾರು ಈ ರೀತಿ ಕಾನೂನು ಬಾಹಿರ ಕ್ರಮದ ಬಗ್ಗೆ ಸರ್ಕಾರವು ಸಂಬಂಧಪಟ್ಟವರ ಮೇಲೆ ಯಾವ ಕ್ರಮಗಳನ್ನು ತೆಗೆದು ಕೊಳ್ಳಲಾಗುವುದು? | ಮೀನುಗಾರಿಕೆ ಇಲಾಖೆಯ ಮೀನುಮರಿ ಕೇಂದ್ರದ ಅಭಿವೃದ್ಧಿ ಹಾಗೂ ಸಾರ್ವಜನಿಕರಿಗೆ / ಸಿಬ್ಬಂದಿಯವರಿಗೆ ಶೌಚಾಲಯ ಸೌಕರ್ಯವನ್ನು ಒದಗಿಸುವ ಹಾಗೂ ಅನುದಾನ ವ್ಯಪಗತ ಆಗುವುದನ್ನು ತಪ್ಪಿಸುವ ಉದ್ದೇಶವಿರುವುದರಿಂದ, ಅರಣ್ಯ ಇಲಾಖೆಯ ಅನುಮತಿ ನಿರೀಕ್ಷಿಸಿ ಅಧಿಕಾರಿಯು ಕ್ರಮ ಕೈಗೊಂಡಿರುತ್ತಾರೆ. |

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು